

ಅವರು ಖುದ್ದಾಗಿ ವಿಶಾಲ್‌ಗೆ ಫೋನಾಯಿಸಿ ಬುದ್ಧಿ ಹೇಳಿದ್ದನ್ನು ಅರುಣನೇ ಬಂದು ಹೇಮಾಳ ಮುಂದೆ ಹೇಳಿಕೊಂಡಿದ್ದ.

ಮತ್ತೆ ವಿಶಾಲ್ ಖ್ಯಾತೆತೆಗೆಯುತ್ತಾನೆನ್ನುವುದನ್ನು ಕನಸಿನಲ್ಲಿಯೂ ಅವಳು ಊಹಿಸಿರಲಿಲ್ಲ. ಅವನು ಮನೆ ಬಾಗಿಲಿಗೆ ಬಂದವನಾದರೂ ಯಾವ ಮುಜುಗರವೂ, ಅಳುಕೂ ಇಲ್ಲದೆ ನೇರವಾಗಿಯೇ ಉತ್ತರಿಸಿದಳು. ಈ ವಿಷಯವನ್ನು ಪೂರ್ಣಿಮತ್ತೆಗೂ ಹೇಳುವೆನೆಂದು ಆತ ಬೆದರಿಸಿದರೂ ಹೇಮಾ ನಕ್ಕಳಷ್ಟೇ. ಅವಳೂ ಅರುಣ ಇಬ್ಬರೂ ಮುಂದೆ ಮದುವೆಯಾಗುವ ವಿಷಯ ನಿಕ್ಕಿ ಮಾಡಿದ್ದೇ ಪೂರ್ಣಿಮತ್ತೆ. ಅದು ವಿಶಾಲ್‌ಗೆ ಗೊತ್ತಿಲ್ಲ. ಅದನ್ನು ಹೇಳುವ ಅಗತ್ಯವೂ ಹೇಮಾಳಿಗಿಲ್ಲ.

ಏನಾದರೊಂದು ಉತ್ತರ ಕೊಟ್ಟು ಅವನನ್ನು ಕಳುಹಿಸಬೇಕೆಂದುಕೊಳ್ಳುತ್ತಿರುವಾಗಲೇ ಅರುಣ ಒಳಗೆ ಬಂದ. ಅವನು ಬಾಗಿಲು ತೆರೆದಿರುವುದರ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ. ಹೇಮಾ ತನಗಾಗಿ ಕಾಯುತ್ತಿರುತ್ತಾಳೆನ್ನುವುದು ಸ್ಪಷ್ಟವಾಗಿತ್ತು. ಆದರೆ ಆ ಹೊತ್ತಿನಲ್ಲಿ ವಿಶಾಲ್‌ನನ್ನು ಆತ ನಿರೀಕ್ಷಿಸಿಯೇ ಇರಲಿಲ್ಲ.

***

ಅರುಣನಿಗೆ ಈಗೆಲ್ಲವೂ ಸ್ಪಷ್ಟವಾಗುತ್ತಾ ಬಂತು. ಸಬ್‌ಇನ್‌ಸ್ಪೆಕ್ಟರ್ ಸುಚರಿತ್ ಪಕ್ಕದ ಮನೆಯ ಯುವಕ ಫೋನ್ ಮಾಡಿ ಹೇಮಾಳ ಬಗ್ಗೆ ಏನೋ ಅಸಂಬದ್ಧ ಮಾತುಗಳನ್ನು ಹೇಳಿದನೆಂದೂ, ಅದನ್ನು ತಿಳಿದುಕೊಳ್ಳುವ ಉದ್ದೇಶದಿಂದ ಅರುಣನನ್ನು ಅಗತ್ಯವಾಗಿ ಬಂದು ಹೋಗುವಂತೆ ಹೇಳಿದ್ದಕ್ಕಾಗಿಯೇ ಸಮಯದ ಪರಿವೆಯನ್ನು ಮೀರಿ ಅರುಣ ಸ್ಟೇಶನ್‌ಗೆ ಹೋಗಿದ್ದ. ಜೊತೆಗೆ ಆ ಯುವಕನನ್ನು ಎಚ್ಚರಿಸುವುದಾಗಿಯೂ ಭರವಸೆಯನ್ನು ನೀಡಿದ್ದ. ಅರುಣ ಆ ಯುವಕ ಹೊರಗೆಲ್ಲಾದರೂ ಕಾಣಿಸಿಕೊಂಡರೆ ತನ್ನ ಸ್ಕೂಟರ್‌ನಲ್ಲಿಯೇ ಅವನನ್ನು ಕರೆ ತರುವುದೋ ಇಲ್ಲ, ಕರೆದುಕೊಂಡು ಹೋಗುವುದೋ ಮಾಡುತ್ತಿದ್ದ. ಅರುಣನಲ್ಲಿ ಅವನು ಮುಕ್ತವಾಗಿ ಮಾತಾಡುತ್ತಿದ್ದನಾದರೂ ಅವನ ಬಳಿ ಹೇಮಾ ವಿಷಯ ಪ್ರಸ್ತಾಪಿಸಿರಲಿಲ್ಲ. ಹೇಮಾಳನ್ನು ಆ ಯುವಕ ಎಷ್ಟೊಂದು ಪ್ರೀತಿಸುತ್ತಿದ್ದಾನೆಂದರೆ ಅವಳನ್ನು ಒಂದು ದಿನ ನೋಡದಿದ್ದರೆ ನಿದ್ದೆಯೂ ಬರುವುದಿಲ್ಲವಂತೆ. ಆ ವಿಷಯವನ್ನೇ ಕೇಳಬೇಕೆಂದುಕೊಂಡು ಮನೆಗೆ ಬಂದರೆ, ವಿಶಾಲ್ ಈ ಹೊತ್ತಿನಲ್ಲಿ ಹೇಮಾಳನ್ನು ಹುಡುಕಿಕೊಂಡು ಬಂದಿದ್ದಾನೆ!

ಹೇಮಾ ಅಧೀರಳಾಗುವುದಕ್ಕೆ ಕಾರಣವಿಲ್ಲದಿಲ್ಲ. ವಿಶಾಲ್ ವಿಷಯವನ್ನು ಮನೆ ಬಾಗಿಲಿನವರೆಗೂ ಎಳೆದು ತಂದು ತಕರಾರು ತೆಗೆಯುವುದು ಅರಿವಾಗುತ್ತಲೇ ಅರುಣ ತಾಳ್ಮೆಯಿಂದ ಅವನ ಮಾತುಗಳನ್ನು ಕೇಳಿಸಿಕೊಂಡು ಸರಿಯಾದ ಉತ್ತರವನ್ನೇ ಅವನಿಗೆ ನೀಡಬೇಕೆಂದು ಯೋಚಿಸಿದ ಮತ್ತು ಮಾತನ್ನು ಆಡಿದ.

ಅದರಲ್ಲಿ ಹೇಮಾಳದ್ದೇನೂ ತಪ್ಪಿಲ್ಲವೆನ್ನುವಂತೆ ವಾದವಿತ್ತು. ಸುಮ್ಮನೆ ಆಡಿ ತೋರಿಸುವುದಕ್ಕೆ ಅರ್ಥವಿಲ್ಲವೆಂದೂ ತಾನು ಹೇಮಾಳನ್ನು ಮದುವೆಯಾಗುವವನಿದ್ದೇನೆಂದೂ ಸ್ಪಷ್ಟಪಡಿಸಿದ. ವಿಶಾಲ್ ಮಾತಿಲ್ಲದೆ ಎದ್ದು ಹೋದ. ಹೇಮಾಳೇ ಒಂದು ನಿರ್ಧಾರಕ್ಕೆ ಬಂದವಳು ಮರು ದಿನ ರಾಜೀನಾಮೆ ಪತ್ರವನ್ನು ವಿಶಾಲ್‌ನ ಟೇಬಲ್ ಮೇಲಿಟ್ಟು ಕಂಪನಿಯ ನಿಯಮಾನುಸಾರ ಮೂರು ತಿಂಗಳ ಸಂಬಳವನ್ನು ಕಟ್ಟಿ, ಯಾರಿಗೂ ಏನೂ ಹೇಳದೆ ಮನೆಗೆ ಬಂದಳು.

ಆರೋಪ ಅವಳ ಬೆನ್ನ ಹಿಂದೆಯೇ ಬಂತು. ಆಫೀಸಿನ ಬಹು ಮುಖ್ಯವಾದ ದಾಖಲೆ ಪತ್ರಗಳಿರುವ ಕಡತ ಕಾಣೆಯಾಗಿದ್ದು, ಅದನ್ನು ಹೇಮಾಳೆ ತೆಗೆದಿರಿಸಿದ್ದಾಳೆಂದು ಅವಳ ಮೇಲೆ ಲೀಗಲ್ ಆಕ್ಷನ್ ತೆಗೆದುಕೊಳ್ಳಬೇಕೆಂದು ಹೇಮಾಳ ಮೇಲೆ ಕೇಸ್ ಹಾಕಲಾಯಿತು. ಆದರೆ ಎಲ್ಲಿಯೂ ವಿಶಾಲ್‌ನ ಹೆಸರು ಇರಲಿಲ್ಲ. ಆದರೆ ಅರುಣ ಮತ್ತು ಹೇಮಾಳ ಮದುವೆಯ ದಿನ ನಿಕ್ಕಿಯಾದ ಮೇಲೆ ಪೂರ್ಣಿಮತ್ತೆಯೇ ಒಮ್ಮೆ ಅವರ ಮನೆಗೆ ಬಂದಾಗಲೇ ಈ ವಿಷಯ ತಿಳಿದದ್ದು.

ವಕೀಲರ ನೋಟೀಸು ಬಂದಾಗ ಪೂರ್ಣಿಮತ್ತೆಗೆ, ಅಲ್ಲಿಯೇ ಇದ್ದವರಿಗೆ ಅದನ್ನು ಕೇಳಿ ಆಘಾತವಾಯಿತು. ತಡ ಮಾಡದೆ ವಿಶಾಲ್‌ಗೆ ಫೋನಾಯಿಸಿದರು. ಅವರು ಉಟ್ಟ ಬಟ್ಟೆಯಲ್ಲೆಂಬಂತೆಯೇ ಅರುಣ ಹೇಮಾರನ್ನು ಕರೆದುಕೊಂಡು ನೇರವಾಗಿ ಅವನ ಆಫೀಸಿಗೆ ಬಂದರು. ವಿಶಾಲ್ ತಪ್ಪಿಸಿಕೊಳ್ಳುವಂತೆಯೇ ಇರಲಿಲ್ಲ. ಪೂರ್ಣಿಮತ್ತೆಯ ಎದುರು ಸೋಲಲೇಬೇಕಾಯಿತು.

ಪೂರ್ಣಿಮತ್ತೆ ಹೆಣ್ಣುಮಗಳಿಗೆ ಅನ್ಯಾಯವಾಗುವುದನ್ನು ಸಹಿಸರು. ವಿಶಾಲ್ ತಪ್ಪೊಪ್ಪಿಕೊಳ್ಳುವಂತೆ ಒತ್ತಾಯಿಸಿದ್ದಲ್ಲದೆ, ಅವಳ ರಾಜೀನಾಮೆಯನ್ನು ಸ್ವೀಕರಿಸದಂತೆ ಹೇಳಿದರು. ವಿಶಾಲ್ ಆಗಲೂ ಮೌನವಾಗಿಯೇ ಇದ್ದ. ಹೇಮಾಳಿಗೆ ಇನ್ನು ವಿಶಾಲ್‌ನ ಸಂಸ್ಥೆಯಲ್ಲಿ ಕೆಲಸ ಮಾಡುವ ಮನಸ್ಸು ಇಲ್ಲವಾಗಿತ್ತು. ಅರುಣ ಕೂಡ ವಿರೋಧಿಸಲಿಲ್ಲ.

ಅಷ್ಟರಲ್ಲಿಯೇ ಕೊರಿಯರ್ ಮೂಲಕ ಅವಳ ಹೆಸರಿಗೆ ಕಂಪನಿಯಿಂದ ಒಂದು ಪತ್ರವಿತ್ತು. ಅದನ್ನು ತೆರೆದು ನೋಡಿದಳು. ಅದು ಅವಳಿಗೆ ಕಂಪನಿಯ ಚೀಫ್ ಎಕ್ಸಿಕ್ಯೂಟಿವ್ ಆಗಿ ಬಡ್ತಿ ನೀಡಿದ ಪತ್ರ. ಅದು ಮನಮೋದನೇ ಕಳುಹಿಸಿದ ಪತ್ರ. ಅವಳು ಪತ್ರವನ್ನು ಹಾಗೇ ಹಿಡಿದು ಅರುಣನನ್ನೇ ನೋಡುತ್ತಿದ್ದಳು. ಅರುಣ ಪತ್ರದ ಮೇಲೆ ಕಣ್ಣಾಡಿಸಿ ಹೊರಗೆ ನಡೆದ.

ಹೇಮಾಳಿಗೆ ಮತ್ತೆ ತಳಮಳ. ಅರುಣ ಅಸಮಾಧಾನದಿಂದ ಹೊರಗೆ ನಡೆದಾಗಲೇ ಅವಳಿಗೆ ವಿಶಾಲ್‌ನ ಕಂಪನಿಯಲ್ಲಿ ತಾನು ಮುಂದುವರೆಯಬೇಕೆ, ಇಲ್ಲ, ಅರುಣನ ಕೈ ಹಿಡಿದು ಸಂಸಾರಕ್ಕೆ ಧುಮುಕಬೇಕೆ? ಗೊಂದಲದಲ್ಲಿಯೇ ಕುಳಿತಿದ್ದವಳನ್ನು ಕಡೆಗಣಿಸಿದಂತೆ ಅರುಣ ಅವಳನ್ನು ಮಾತಾಡಿಸದೆ ಒಳಗೆ ಬಂದು ಕುಳಿತ.

ಆ ಸಂಜೆ ಹೇಮಾ ನಿರ್ಧಾರ ತೆಗೆದುಕೊಳ್ಳುವ ಮೊದಲೇ ಪೂರ್ಣಿಮತ್ತೆಯ ಫೋನ್ ಕರೆ ಬಂತು. ಯಾವುದೇ ಕಾರಣಕ್ಕೂ ವಿಶಾಲ್‌ನ ಮಾತಿಗೆ ಮಣಿಯಬಾರದೆಂದೂ, ರಾಜೀನಾಮೆ ಪತ್ರವನ್ನು ವಾಪಾಸು ತೆಗೆದುಕೊಳ್ಳಬೇಕೆಂದು ಸ್ಪಷ್ಟವಾಗಿ ತಿಳಿಸಿದರು. ತನ್ನ ನಿರ್ಧಾರದಿಂದ ಅರುಣ ಬೇಸರಿಸಿಕೊಂಡರೆ ಎನ್ನುವುದು ಅವಳ ಚಿಂತೆ.

ಅರುಣನಿಗೆ ನಿಜವಾಗಿಯೂ ಈ ವಿಷಯದಲ್ಲಿ ಅಸಮಾಧಾನವೇ ಇತ್ತು. ಬೇರಿನ್ನೇನೋ ದುರುದ್ದೇಶದಿಂದಲೇ ವಿಶಾಲ್ ಮನಮೋದನ ಮೂಲಕ ಅವಳಿಗೆ ಬಡ್ತಿಯನ್ನು ನೀಡಿರಬಹುದೆಂದು ಅವನ ಮನ ಹೇಳುತ್ತಿತ್ತು. ಅವನು ಯಾವ ರೀತಿಯಿಂದಲೂ ಹೇಮಾಳನ್ನು ಆ ವಿಷಯವಾಗಿ ಉತ್ತೇಜಿಸಲೂ ಇಲ್ಲ, ಮಾತನಾಡಿಸಲೂ ಇಲ್ಲ.

ಆ ದಿನ ಶನಿವಾರ ಹೇಮಾ ಏನೋ ನಿರ್ಧಾರವನ್ನು ತೆಗೆದುಕೊಂಡು ಎಂದಿನಂತೆ ಬೆಳಗ್ಗೆ ಹೊರಟು ಗೇಟಿನ ಬಳಿ ಬಂದಾಗ ಪ್ರಮಥ್ ಸಿಟೌಟ್‌ಗೆ ಬಂದು ನಿಂತು ಅವಳನ್ನು ಗಮನಿಸುತ್ತಿದ್ದ. ಹೇಮಾ ರಸ್ತೆಗಿಳಿಯುತ್ತಿರುವುದು ಗಮನಿಸಿ ಆತ ತನ್ನ ಕಾರನ್ನು ಹೊರಗೆ ತೆಗೆದು ಆಟೊಗಾಗಿ ಕಾಯುತ್ತಿದ್ದ ಹೇಮಾಳ ಬಳಿ ನಿಲ್ಲಿಸಿ ಆಹ್ವಾನಿಸಿದ. ಮೊದಲೇ ಅವನ ಬಳಿ ಮಾತಾಡುವ ಆಸ್ಥೆಯಿದ್ದ ಅವಳು ಅವನ ಆಹ್ವಾನವನ್ನು ನಿರಾಕರಿಸದೆ ಬಾಗಿಲು ತೆರೆದು ಕುಳಿತಳು. ಅವನು ಕಾರನ್ನು ಮುಂದಕ್ಕೋಡಿಸಿದರೂ ಮಾತಾಡಲಿಲ್ಲ. ಹೇಮಾ ಆಫೀಸಿನ ಬಳಿ ಇಳಿಯುತ್ತಲೇ ಅವನು ಮುಗುಳ್ನಕ್ಕು ಕಾರನ್ನು ಹಿಂದಕ್ಕೆ ತೆಗೆದ.

ಹೇಮಾ ಆಫೀಸ್‌ಗೆ ಬರುತ್ತಲೇ ಆಘಾತಕರ ಸುದ್ದಿಯೊಂದು ಕಾದು ಕುಳಿತಿತ್ತು. ವಿಶಾಲ್‌ನನ್ನು ಕಂಪನಿ ಹೈದರಾಬಾದ್‌ಗೆ ವರ್ಗಾಯಿಸಿ, ಅಲ್ಲಿಯ ಸಿಇಒ ಆಗಿದ್ದ ಮನಮೋದನನ್ನು ಇಲ್ಲಿಗೆ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ನೇಮಿಸಿತ್ತು. ಹೇಮಾಳನ್ನು ಮನಮೋದನನೇ ಎದುರುಗೊಂಡ. ಅವಳು ಮುಜುಗರಪಡಲಿಲ್ಲ. ಒಬ್ಬ ದಕ್ಷ ಅಧಿಕಾರಿಯ ವರ್ಚಸ್ಸುಗಳೆಲ್ಲಾ ಹೇಗಿರುತ್ತದೆಯೋ ಅದೇ ರೀತಿ ಗಂಭೀರಳಾಗಿ ಮನಮೋದನ ಜೊತೆಗೆ ನಡೆದುಕೊಂಡಳು. ಅವನು ಹೇಮಾಳನ್ನು ಕರೆದುಕೊಂಡು ಬಂದು ಅವಳ ಕ್ಯಾಬಿನ್‌ನಲ್ಲಿ ಕುಳ್ಳಿರಿಸಿ ಅಭಿನಂದಿಸಿದ. ಹೇಮಾ ಮುಗುಳ್ನಗುತ್ತಲೇ ರಿವಾಲ್ವಿಂಗ್ ಚೇರ್‌ನಲ್ಲಿ ಕುಳಿತು ಅರುಣನಿಗೆ ಫೋನಾಯಿಸಿದಳು.

ಪ್ರತಿಕ್ರಿಯಿಸಿ: feedback@sudha.co.in